ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 24–12–2020

# ಪತ್ರಿಕಾ ಪ್ರಕಟಣೆ

## ಗುಡವಿ ಪಕ್ಷಿಧಾಮದ ಸುಸ್ಥಿರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್‌ಜಾರಿಮಾಡಿ. ಮಾನ್ಯ ಮುಖ್ಯ ಮಂತ್ರಿಗಳಿಗೆ ಜೀವವೈವಿಧ್ಯ ಮಂಡಳಿ ಶಿಫಾರಸು:

**ಬೆಂಗಳೂರು, ಡಿಸೆಂಬರ್ 24 (ಕರ್ನಾಟಕ ವಾರ್ತೆ):**

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಅವರು ಗುಡವಿ ಪಕ್ಷಿಧಾಮ ಪುನಶ್ಚೇತನ ಯೋಜನೆ ಜಾರಿ ಮಾಡಲು ವಿಶೇಷ ಶಿಫಾರಸು–ಮನವಿಯನ್ನು ದಿನಾಂಕ:23–12–2020 ರಂದು ಮುಖ್ಯ ಮಂತ್ರಿ ಗೃಹ ಕಛೇರಿ ಕೃಷ್ಣಾದಲ್ಲಿ ನೀಡಿದ್ದಾರೆ.

“ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಗುಡವಿ ಪಕ್ಷಿಧಾಮ ರಾಜ್ಯದಲ್ಲೇ ಅತಿದೊಡ್ಡ ಪಕ್ಷಿಧಾಮವಾಗಿದೆ. ಆದರೆ ಮೂಲ ಸೌಕರ್ಯಗಳ ಕೊರತೆಯಿಂದ ಗುಡವಿ ಪಕ್ಷಿಧಾಮ ಸೊರಗುತ್ತಿದೆ. ಗುಡವಿ ಪಕ್ಷಿಧಾಮ_ಪುನಶ್ಚೇತನ ಯೋಜನೆ ಜಾರಿ ಮಾಡಬೇಕು.

ಪಕ್ಷಿಧಾಮ ವನ್ಯಜೀವಿ ಅರಣ್ಯ ಇಲಾಖೆ ವಲಯ ಕಛೇರಿ ಗುಡವಿಯಲ್ಲೇ ಸ್ಥಾಪನೆ ಆಗಬೇಕು. ಸ್ಥಾನಿಕ ಜನರ ಸಹಭಾಗಿತ್ವದ ನಿರ್ವಹಣಾ ಸಮಿತಿ (ಇಕೊ ಡೆವಲೆಪ್‌ಮೆಂಟ್‌ಕಮಿಟಿ) ರಚನೆ ಆಗಬೇಕು. ಪರಿಸರ ಪ್ರವಾಸ್ಯೋದ್ಯಮಕ್ಕೆ ಗುಡವಿಗೆ ಸಂಪರ್ಕ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಸುಮಾರು 15000 ಪಕ್ಷಿಗಳು ಮಳೆಗಾಲ–ಚಳಿಗಾಲದಲ್ಲಿ ಇಲ್ಲಿ ಬೀಡು ಬಿಡುತ್ತವೆ. 43 ಪಕ್ಷಿ ಕುಟುಂಬಗಳ 217 ಜಾತಿಯ ಪಕ್ಷಿಗಳನ್ನು ಗುಡವಿ ಪಕ್ಷಿಧಾಮದಲ್ಲಿ ಗುರುತಿಸಲಾಗಿದೆ. ಬೇರೆ ದೇಶಗಳಿಂದ ಇಲ್ಲಿಗೆ ಪಕ್ಷಿಗಳು ಬರುತ್ತವೆ. 186 ಎಕರೆ ಪ್ರದೇಶಕ್ಕೆ ವ್ಯಾಪಿಸಿರುವ ಪಕ್ಷಿಗಳ ಆವಾಸಸ್ಥಾನ ಕೆರೆ. ಈ ಪಕ್ಷಿಧಾಮದಲ್ಲಿ ಪಕ್ಷಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆ ಆಗುತ್ತಿದೆ ಎಂಬ ಆತಂಕವನ್ನು ಪಕ್ಷಿ ತಜ್ಞರು ವ್ಯಕ್ತ ಮಾಡಿದ್ದಾರೆ ಎಂದು ಜೀವವೈವಿಧ್ಯ ಮಂಡಳಿ ನೀಡಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಗುಡವಿ ಸುತ್ತಲಿನ ಹಳ್ಳಿಗಳ ಪ್ರದೇಶಗಳಲ್ಲಿ ಭತ್ತ ಬೆಳೆಯುವ ಜೌಗು ಪ್ರದೇಶ ಕಡಿಮೆ ಆಗಿರುವುದು ಪಕ್ಷಿ ಸಂತತಿ ಅಭಿವೃದ್ಧಿಗೆ ಕಂಟಕ. ಸುತ್ತಲಿನ ಕೃಷಿ ಭೂಮಿಗಳಲ್ಲಿ ಅತಿ ರಾಸಾಯನಿಕ ಔಷಧಿ ಸಿಂಪಡಣೆ ಸಹಾ ಮಾರಕ ಸಂಗತಿ ಎಂಬುದನ್ನು ತಜ್ಞರು ಎತ್ತಿ ಹೇಳಿದ್ದಾರೆ. ವನ್ಯಜೀವಿ ಅರಣ್ಯ ಇಲಾಖೆ ಗುಡವಿ ಪಕ್ಷಿಧಾಮದ ಕೆಳಹಂತದ

ಸಿಬ್ಬಂದಿಗೆ ಅಗತ್ಯ ಪಗಾರ, ಸೌಲಭ್ಯ ಕಲ್ಪಿಸಬೇಕು. ಗುಡವಿ ಪಕ್ಷಿಧಾಮವಿರುವ ಕೆರೆಗೆ ಬರುವ ನೀರು, ಇಲ್ಲಿಂದ ಹೊರಹೋಗುವ ನೀರು, ಹೂಳು ತುಂಬುವಿಕೆ ಇವೆಲ್ಲವುಗಳ ಪರಿಣಾಮ ಪಕ್ಷಿಗಳ ಸಂತತಿ ವೃದ್ಧಿಗೆ ಪೂರಕವೆ/ಮಾರಕವೆ ಎಂಬ ಬಗ್ಗೆ ತಜ್ಞ ಅಧ್ಯಯನ, ಅಭಿಪ್ರಾಯ ಅವಶ್ಯ ಎಂದು ವರದಿ ಹೇಳಿದೆ. ಮಂಗಗಳ ಹಾವಳಿಯಿಂದ ಪಕ್ಷಿಗಳ ಗೂಡು ಮೊಟ್ಟೆ-ಮರಿ ನಾಶವಾಗುತ್ತಿದೆ. ಇದಕ್ಕೆ ತಡೆ ಹಾಕಬೇಕು ಎಂದು ವರದಿ ಹೇಳಿದೆ.

ಪಕ್ಷಿಧಾಮ ಸುತ್ತಲಿನ ಬೇಲಿ, ಅಗಳ, ಮೆಶ್ ಬೇಲಿ ಇವೆಲ್ಲ ಹಾಳಾಗಿದ್ದು, ಪುನಃ ನಿರ್ಮಿಸಬೇಕಿದೆ. ಪಕ್ಷಿಧಾಮ ಭೂಮಿ ಅತಿಕ್ರಮಣ ಆಗದಂತೆ ತಡೆಬೇಲಿ ಬೇಕು ಎಂದು ವರದಿ ಹೇಳಿದೆ. ವಿದ್ಯಾರ್ಥಿಗಳು, ಪಕ್ಷಿಪ್ರೇಮಿಗಳು, ಪ್ರವಾಸಿಗರು ಬಂದಾಗ ಅವಶ್ಯವಿರುವ ಸೌಕರ್ಯಗಳನ್ನು ಪಕ್ಷಿಧಾಮದ ಪ್ರವೇಶ ದ್ವಾರದ ಬಳಿ ಕಲ್ಪಿಸಬೇಕು. ಕ್ಯಾಂಟೀನ್, ಟಾಯ್ಲೆಟ್, ಮುಂತಾದ ಅಗತ್ಯ ಸೌಲಭ್ಯಬೇಕು. ಮಾಹಿತಿ ಕೇಂದ್ರ ಬೇಕು. ಆದರೆ ಅತಿಯಾದ ಕಾಂಕ್ರೀಟೀಕರಣ ಸಲ್ಲದು ಎಂದು ಅಭಿಪ್ರಾಯ ಪಡಲಾಗಿದೆ. ಪಕ್ಷಿಧಾಮದ ಬಳಿ ಯಾವುದೇ ಬೋಟಿಂಗ್ (ದೋಣಿ ಸೇವೆ) ಕಲ್ಪಿಸಬಾರದು. ಪಕ್ಷಿಗಳ ಓಡಾಟಕ್ಕೆ, ಸ್ವಾತಂತ್ರ್ಯಕ್ಕೆ ಭಂಗ ಉಂಟು ಮಾಡಬಾರದು ಎಂದು ಸಲಹೆ ನೀಡಲಾಗಿದೆ. ಪಕ್ಷಿ ತಜ್ಞತೆ ಇರುವವರನ್ನು ಗೈಡ್ ಆಗಿ ನಿಯುಕ್ತಿ ಮಾಡಬೇಕು ಎಂದು ಶಿಫಾರಸಿನಲ್ಲಿ ಹೇಳಲಾಗಿದೆ.

ಗುಡವಿ ಪಕ್ಷಿಧಾಮದ ಛಾಯಾಚಿತ್ರ ಲಗತ್ತಿಸಲಾಗಿದೆ.)

## ಸಚಿವರ ಪ್ರವಾಸ

**ಬೆಂಗಳೂರು, ಡಿಸೆಂಬರ್ 24 (ಕರ್ನಾಟಕ ವಾರ್ತೆ):**

ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ ಅವರು ಡಿಸೆಂಬರ್ 28 ಮತ್ತು 29 ರಂದು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಡಿಸೆಂಬರ್ 29 ರಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## "ಮಣ್ಣು ಸಂರಕ್ಷಣೆ ಮತ್ತು ಭೂಬಳಕೆ ಯೋಜನೆ" ಕುರಿತು ಅಂತಾರಾಷ್ಟ್ರೀಯ ವೆಬಿನಾರ್

**ಬೆಂಗಳೂರು, ಡಿಸೆಂಬರ್ 24 (ಕರ್ನಾಟಕ ವಾರ್ತೆ):**

ಕನಾಟಕ ಸರ್ಕಾರ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಭೌಗೂಳಿಕ ವಿಜ್ಞಾನ ವಿಭಾಗ ಹಾಗೂ ಯುನಿಯನ್ ಆಫ್ ಇನ್ಫಾರ್ಮೆಷನ್ ಟೆಕ್ನಾಲಜಿಸ್ಟ್ಸ್ ರವರ ಸಹಯೋಗದಲ್ಲಿ ಅಕಾಡೆಮಿಯ ಪ್ರೊ. ಯು. ಆರ್. ರಾವ್

ಸಭಾಂಗಣದಲ್ಲಿ **23ನೇ ಡಿಸೆಂಬರ್ 2020ರಂದು** ನಡೆದ **"ಮಣ್ಣು ಸಂರಕ್ಷಣೆ ಮತ್ತು ಭೂಬಳಕೆ ಯೋಜನೆ"** ಕುರಿತ ಅಂತಾರಾಷ್ಟ್ರೀಯ ವೆಬಿನಾರ್ ಹಾಗೂ **'ಯುಜಿಟಿ ಎಕ್ಸಲೆನ್ಸಿ ಪ್ರಶಸ್ತಿ'** ಪ್ರದಾನ ಸಮಾರಂಭವನ್ನು ಇಸ್ರೊ ಸಂಸ್ಥೆಯ ಮಾಜಿ ಅಧ್ಯಕ್ಷರಾದ **ಡಾ. ಎ.ಎಸ್. ಕಿರಣ್‌ಕುಮಾರ್‌ರವರು** ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಯೊಇನ್ಫಾರ್ ಮಾಟಿಕ್ಸ್ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆಗೈದ ವಿಜ್ಞಾನಿಗಳಾದ **ಡಾ. ಹೆಚ್. ಹೊನ್ನೇಗೌಡ,** ನಿವೃತ್ತ ವಿಶೇಷ ಕಾರ್ಯದರ್ಶಿಗಳು/ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್/ ಸದಸ್ಯ ಕಾರ್ಯದರ್ಶಿಗಳು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಮದ್ರಾಸ್ ವಿಶ್ವವಿದ್ಯಾನಿಲಯ ಭೌಗೋಳಿಕ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರಾದ **ಡಾ. ಎನ್. ಶಿವಜ್ಞಾನಂ** ಹಾಗೂ ಎಸ್.ಪಿ.ಪುಣೆ ವಿಶ್ವವಿದ್ಯಾನಿಲಯದ **ಡಾ. ವೀಣಾ ಜೋಶಿ** ರವರಿಗೆ **ಯುಜಿಟಿಯ** ಅತ್ಯುತ್ತಮ ವಿಜ್ಞಾನಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.






ಈ ಸಂದರ್ಭದಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರಾದ **ಪ್ರೊ. ಎಸ್. ಅಯ್ಯಪ್ಪನ್,** ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ **ಪ್ರೊ. ಕೆ.ಆರ್. ವೇಣುಗೋಪಾಲ್** ಭೌಗೋಳಿಕ ವಿಜ್ಞಾನ ವಿಭಾಗದ ಅಧ್ಯಕ್ಷರಾದ **ಪ್ರೊ. ಅಶೋಕ್ ಡಿ. ಹಂಜಗಿ,** ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ **ಡಾ. ಎ. ಎಂ. ರಮೇಶ್, ಪ್ರೊ. ರಾಯಮನೆ** ಹಾಗೂ ನ್ಯಾಕ್ ಸಂಸ್ಥೆಯ ಸಹಾಯಕ ನಿರ್ದೇಶಕಿ **ಡಾ. ಪ್ರಿಯಾ ನಾರಾಯಣ್** ಮತ್ತಿತರರು ಉಪಸ್ಥಿತರಿದ್ದರು.

Webinar on **"Soil Conservation and Land use Planning**

Bengaluru, Dece 24 (Karnataka Information)

Karnataka Science and Technology Academy, Dept. of Science and Technology, Government of Karnataka in collaboration with Dept. of Geography, Bangalore University and Union of Geographic Information Technologists organised an International Webinar on **"Soil Conservation and Land use Planning" and "UGT's Excellence Award" Ceremony at Prof. U. R. Auditorium of KSTA on 23 Dec. 2020.** This Program was inaugurated by **Dr. A. S. Kiran Kumar,** Former Chairman of ISRO/ Secretary, DOS, GOI.

In this program, Union of Geographic Information Technologists have presented the UGT's Excellence Award to the scientists who have contributed more for the development of Geoinformatics **Dr. H. Honnegowda**, Former Special Secretary/MD, KSTePS/Member Secretary, KSTA, Dept. of Science and Technology, GOK and **Prof. Sivagnanam** from Madras University, Chennai and **Prof. Veena Joshi** from S. P. Pune University, Pune have been honoured he **UGT's Excellence Award**.





On this occasion, Hon'ble Chairman of KSTA **Prof. S. Ayyappan**, Hon'ble Vice Chancellor of Bangalore University **Prof. K. R. Venugopal,** CEO of KSTA **Dr. A. M.**

**Ramesh**, UGT Convener & Chairman, Dept. of Geography **Prof. Ashok D Hanjagi**, **Prof. Rayamane** and Asst. Director of NAAC **Dr. Priya Narayanan** and other faculty members were present.

**Karnataka State Pollution Control Board**
**ParisaraBhavan, Bengaluru**
**AQI of the CAAQM stations established in Bengaluru City**
**Date :24.12.2020**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 103 | Moderate | $PM_{.10}$ |
| 2 | Jayanagar 5th Block, Shalini ground | 121 | Moderate | $PM_{2.5}$ |
| 3 | KAVIKA, Mysore Road | 105 | Moderate | $PM_{.10}$ |
| 4 | Rajeev Gandhi Institute of Chest Disease, NIMHANS, Hombegowda Nagar | 89 | Satisfactory | $O_3$ |
| 5 | HSR Layout, near Central Silkboard | 90 | Satisfactory | $PM_{2.5}$ |
| 6 | City Railway Station, Magestic, Bengaluru | 54 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 29 | Good | $PM_{10}$ |
| 8 | BWSSB, Kadabesanahalli | 78 | Satisfactory | $PM_{2.5}$ |
| 9 | Peenya | 104 | Moderate | $O_3$ |

| 10 | BTM Layout | 120 | Moderate | $O_3$ |
|---|---|---|---|---|

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |

## ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

## ಪರಿಸರ ಭವನ, ಬೆಂಗಳೂರು.

### ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಷ್ಠಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು

**ದಿನಾಂಕ: 24.12.2020**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 103 | ಸಾಧಾರಣ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 121 | ಸಾಧಾರಣ | $PM_{2.5}$ |
| 3 | ಕವಿಕ, ಮೈಸೂರುರಸ್ತೆ | 105 | ಸಾಧಾರಣ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 89 | ತೃಪ್ತಿಕರ | $O_3$ |
| 5 | ಹೆಚ್.ಎಸ್.ಆರ್ ಲೇಔಟ್, [illegible] | 90 | ತೃಪ್ತಿಕರ | $PM_{2.5}$ |

| | | | | |
|---|---|---|---|---|
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 54 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, | 29 | ಉತ್ತಮ | $PM_{10}$ |
| 8 | BWSSB, ಕಾಡಬೀಸನಹಳ್ಳಿ | 78 | ತೃಪ್ತಿಕರ | $PM_{2.5}$ |
| 9 | ಪೀಣ್ಯ | 104 | ಸಾಧಾರಣ | $O_3$ |
| 10 | ಬಿಟಿಎಂ ಲೇಔಟ್ | 120 | ಸಾಧಾರಣ | $O_3$ |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## ವಿಕಲಚೇತನರ ರಿಯಾಯಿತಿ ಬಸ್ ಪಾಸ್ ವಿತರಿಸುವ ದಿನಾಂಕ ವಿಸ್ತರಣೆ

**ಬೆಂಗಳೂರು, ಡಿಸೆಂಬರ್ 24 (ಕರ್ನಾಟಕ ವಾರ್ತೆ):**

2021ನೇ ಸಾಲಿನ ವಿಕಲಚೇತನರ ಪಾಸುಗಳ ವಿತರಣೆ / ನವೀಕರಣವನ್ನು ದಿನಾಂಕವನ್ನು ಡಿಸೆಂಬರ್ 26, 2020 ಕ್ಕೆ ಬದಲಾಗಿ ಜನವರಿ 15, 2021 ರಿಂದ ಪ್ರಾರಂಭಿಸಲಾಗುವುದು.

ಫಲಾನುಭವಿಗಳು ಸೇವಾಸಿಂಧು ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯ. 2020ನೇ ಸಾಲಿನಲ್ಲಿ ವಿತರಿಸಿರುವ ವಿಕಲಚೇತನರ ಬಸ್‌ಪಾಸ್‌ಗಳನ್ನು ಫೆಬ್ರವರಿ 28, 2021 ರವರೆಗೆ ಮಾನ್ಯ ಮಾಡಲಾಗುವುದು ಎಂದು ಬೆಂಗಳೂರು ಕೇಂದ್ರಕಛೇರಿಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭಾರತ್ ಸ್ಟೇಜ್– 4 ವಾಹನಗಳನ್ನು ನೋಂದಾಯಿಸಿಕೊಳ್ಳಲು ಅವಕಾಶ

ಬೆಂಗಳೂರು, ಡಿಸೆಂಬರ್ 24 (ಕರ್ನಾಟಕ ವಾರ್ತೆ):

ದಿನಾಂಕ 31–03–2020ಕ್ಕಿಂತ ಮೊದಲು ಮಾರಾಟವಾಗಿ, ಇ–ವಾಹನ್ ಪೋರ್ಟಲ್‌ನಲ್ಲಿ ವಿವರಗಳನ್ನು ದಾಖಲಿಸಿ ತಾತ್ಕಾಲಿಕ ನೋಂದಣಿ ಹೊಂದಿರುವ ಮತ್ತು ಆನ್‌ಲೈನ್/ಆಫ್‌ಲೈನ್ ಮೂಲಕ ತೆರಿಗೆ ಹಾಗೂ ಶುಲ್ಕ ಪಾವತಿಸಿರುವ ಮತ್ತು ನೋಂದಣಿಗೆ ಬಾಕಿ ಇರುವ ಭಾರತ್ ಸ್ಟೇಜ್–4 ವಾಹನಗಳನ್ನು ದಿನಾಂಕ 01–01–2021ರಿಂದ 16–01–2021 ರವರೆಗೆ ಮಾತ್ರ ಕರ್ನಾಟಕ ರಾಜ್ಯದಲ್ಲಿ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ವಾಹನ ಮಾಲೀಕರು ಭಾರತ್ ಸ್ಟೇಜ್–4 ಮಾಪನದ ವಾಹನಗಳನ್ನು ಸದರಿ ಅವಧಿಯಲ್ಲಿ ಸಂಬಂಧಿಸಿದ ನೋಂದಣಿ ಪ್ರಾಧಿಕಾರದಲ್ಲಿ ಅಗತ್ಯ ದಾಖಲೆಗಳನ್ನು ಹಾಜರುಪಡಿಸಿ ನೋಂದಣಿ ಮಾಡಿಕೊಳ್ಳುವಂತೆ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಅವರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## <u>ಅಭಿನಂದನೆಗಳು</u>

ಬೆಂಗಳೂರು, ಡಿಸೆಂಬರ್ 24 (ಕರ್ನಾಟಕ ವಾರ್ತೆ):

ಭಾರತ ಸರ್ಕಾರದ ಕೇಂದ್ರ ಸಚಿವ ಸಂಪುಟವು ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಪರಿಶಿಷ್ಟ ಜಾತಿಯ ಕಡುಬಡವ ಕುಟುಂಬಗಳ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ನಂತರದ ಉನ್ನತ ಶಿಕ್ಷಣ ಮುಂದುವರೆಸುವ ಸಲುವಾಗಿ ಮುಂದಿನ ಐದು ವರ್ಷಗಳಲ್ಲಿ ರೂ. 59,000/- ಕೋಟಿ ವಿದ್ಯಾರ್ಥಿ ವೇತನ ವಿನಿಯೋಗಿಸಲು ಒಪ್ಪಿಗೆ ನೀಡಿರುವುದು ಸಂತೋಷಕರ ವಿಷಯ ಹಾಗೂ ಸ್ವಾಗತಾರ್ಹ. ಮೇಲಾಗಿ ಈ <u>"ಆಧಾರ್ ಆಧಾರಿತ ಫಲಾನುಭವಿಗಳಿಗೆ ನೇರ ವರ್ಗಾವಣೆ"</u> ರೂಪದಲ್ಲಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಆರ್ಥಿಕ ಮೊತ್ತ ಜಮೆಯಾಗುವುದು ಈ ಯೋಜನೆಯ ವಿಶೇಷತೆಯಾಗಲಿದೆ ಎಂದು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷ ಸಿ. ಮುನಿಕೃಷ್ಣ ಅವರು ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

## <u>ತಂಬಾಕು ಮುಕ್ತ ಕರ್ನಾಟಕ –2025 : ಸಮಾಲೋಚನಾ ಕಾರ್ಯಾಗಾರ</u>

**ಬೆಂಗಳೂರು, ಡಿಸೆಂಬರ್ 23(ಕರ್ನಾಟಕ ವಾರ್ತೆ):**

ರಾಜ್ಯದಲ್ಲಿ ತಂಬಾಕು ಬಳಕೆಯಿಂದಾಗುವು ಆರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಇನ್ನೂ ಐದು ವರ್ಷಗಳಲ್ಲಿ ತಂಬಾಕು ಬಳಕೆಯನ್ನು ಕಡಿಮೆ ಮಾಡುವುದು ಮತ್ತು 18 ವಯಸ್ಸು ಮೇಲ್ಪಟ್ಟವರು ಬಳಸಲು ಇರುವ ಅನುಮತಿಯನ್ನು 25 ವಯಸ್ಸಿಗೆ ಮಾರ್ಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾದ ಕುರಿತು ಸಲಹೆ ಸೂಚನೆಗಳನ್ನು ಪಡೆಯಲು ತಂಬಾಕು ಮುಕ್ತ ಕರ್ನಾಟಕ–2025 ಸಮಾಲೋಚನಾ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಡಾ.ಎಂ.ಸೆಲ್ವರಾಜನ್ ಅವರು ತಿಳಿಸಿದರು.

ಇಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆವತಿಯಿಂದ ನಗರದ ಐ.ಎ.ಎಸ್ ಅಧಿಕಾರಿಗಳ ಸಂಘದ ಆವರದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತಾನಾಡಿದ ಅವರು 2016–17 ರಲ್ಲಿ ನಡೆಸಿದ ಎರಡನೇ ಜಾಗತಿಕ ವಯಸ್ಕರ ತಂಬಾಕು ಸಮೀಕ್ಷೆ (GATS)ಯ ಪ್ರಕಾರ, ಭಾರತದಲ್ಲಿ (ರಾಷ್ಟ್ರೀಯ ಮಟ್ಟದಲ್ರಲಿ) ಶೇ. 28.6ರಷ್ಟು ವಯಸ್ಕರು ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದರೆ, ಕರ್ನಟಕ ರಾಜ್ಯದಲ್ಲಿ ಶೇ.

22.8 ರಷ್ಟು ವಯಸ್ಕರು ಬಳಸುತ್ತಿದ್ದಾರೆ. ಅಂದರೆ ರಾಜ್ಯದ ಒಟ್ಟು 6.11 ಕೋಟಿ ಜನಸಂಖ್ಯೆಯಲ್ಲಿ ಸುಮಾರು ಶೇ.1.3 ಕೋಟಿ (2011 ರ ಜನಗಣತಿಯ ಪ್ರಕಾರ) ಜನರು ತಂಬಾಕು ಉತ್ತಪನ್ನಗಳನ್ನು ಬಳಸುತ್ತಿದ್ದಾರೆ ಎಂದರು.

ಅವರಲ್ಲಿ ಶೆ.12 ರಷ್ಟು ಜನರು ಧೂಮಪಾನಿಗಳಾಗಿದ್ದರೆ, ಶೇ.19 ರಷ್ಟು ಜನರು ವಿವಿಧ ತಂಬಾಕು ಉತ್ಪನ್ನಗಳ ಬಳಕೆದಾರರಾಗಿದ್ದಾರೆ. ಈ ಯವಕರಲ್ಲಿ ಹೆಚ್ಚಿನವರು ಸುಮಾರು 15 ವರ್ಷ ಅಥವಾ ಅದಕ್ಕಿಂತ ಕಡಿಮ ವಯಸ್ಸಿನಲ್ಲಿತೇ ತಂಬಾಕಿನಿಂದಾಗಿವ ಅನಾರೋಗ್ಯ ಮತ್ತು ಮಾರಣಾಂತಿಕ ಪರಿಣಾಮಗಳ ಬಗ್ಗೆ ಗಮನ ಹರಿಸದೆ ಅದನ್ನು ಬಳಸಲು ಪ್ರಾರಂಭಿಸುತ್ತಾರೆ. ಉಸಿರಾಟದ ಕಾಯಿಲೆಗಳ ಸಂಖ್ಯೆ ಮತ್ತು ತಿವ್ರತೆಯ ಹೆಚ್ಚಳ, ದಐಹಿಕ ಸಾಮರ್ಥ್ಯ ಕ್ಷೀಣತೆ ಮತ್ತು ಶ್ವಾಸಕೋಶದ ಬೆಳವಣಿಗೆ ಮತ್ತು ಕಾರ್ಯಚಟಿವಟಿಕೆಯ ಮೇಲೆ ಸಂಭವನೀಯ ಪರಿಣಾಮಗಳು ಯುವಕರು ಎದುರಿಸುತ್ತಿರುವ ಪ್ರಮುಖ ಆರೋಗ್ಯ ಸಮಸ್ಯೆಗಳಲ್ಲಿ ಕೆಲವಾಗಿವೆ.

ರಾಜ್ಯ ಸರ್ಕಾರದ ಪ್ರಯತ್ನಗಳು ಗಮನಾರ್ಹ ಸಕಾರಾತ್ಮಕ ಫಲಿತಾಂಶಗಳನ್ನು ನೀಡುತ್ತಿವೆ GATS 1(2009 ರಲ್ಲಿ ನಡೆಸಿದ ) ಮತ್ತು ಉಂಖಿಖ 2 (2016–17 ರಲ್ಲಿ ನಡೆಸಿದ ) ಸಮೀಕ್ಷೆಗಳ ಪ್ರಕಾರ 15 ರಿಂದ 17 ವರ್ಷದೊಳಗಿನ ವಯಸ್ಕರಲ್ಲಿ ತಂಬಾಕು ಸೇವನೆಯ ಹರಡುವಿಕೆಯು 6 ವರ್ಷಗ ಅವಧಿಯಲ್ಲಿ ಶೇ. 6.8 ರಿಂದ ಶೇ. 3.7 ಕ್ಕೆ ಇಳಿದಿದೆ.

ತಂಬಾಕು ಉತ್ಪನ್ನಗಳನ್ನು ಬಳಸುವ ಯುವಕರ ಸಂಖ್ಯೆಯಲ್ಲಿ ಒಂದಿಷ್ಟು ಇಳಿಕೆ ಕಂಡು ಬಂದಿದ್ದರೂ, ಯುವ ಜನತೆ ತಂಬಾಕು ಉತ್ಪನ್ನಗಳಿಂದ ವಿಮುಖರಾಗಲು ಇನ್ನಷ್ಟು ಪರಿಣಾಮಕಾರಿಯಾಗಿ ತಂಬಾಕು ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕಾಗಿದೆ. ಏಕೆಂದರೆ 2011 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ನಾಲ್ಕು ವಯಸ್ಕರಲ್ಲಿ ಒಬ್ಬರು ಸೆಕೆಂಡ್ ಹ್ಯಾಂಡ್ (ಪರೋಕ್ಷ) ಧೂಮಪಾನಕ್ಕೆ ಒಳಗಾಗುತ್ತಿದ್ದಾರೆ ಮತ್ತು 15 ರಿಂದ 17 ವರ್ಷ ವಯಸ್ಸಿನ ಏಳು ಮಕ್ಕಳಲ್ಲಿ ಒಬ್ಬರು ತಂಬಾಕು ಉತ್ಪನ್ನಗಳನ್ನು ಬಳಸುತ್ತಾರೆ. ಹಾಗೆಯೇ 2019–20 ರ ಅವಧಿಯಲ್ಲಿ ನಡೆಸಿದ ಇತ್ತೀಚಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (NFHS) ಯ ಪ್ರಕಾರ, ಕರ್ನಾಟಕದಲ್ಲಿ 15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಶೇ. 85 ರಷ್ಟು ಮಹಿಳೆಯರು ಮತ್ತು ಶೇ 27.1 ರಷ್ಟು ಪುರುಷರು ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ.

ತಂಬಾಕು ಬಳಕೆ ಐದು ಶತಮಾನಗಳಿಗಿಂತಲೂ ಹೆಚ್ಚು ಕಾಲದಿಂದ ಜಗತ್ತಿನಲ್ಲಿ ಪ್ರಚಲಿತದಲ್ಲಿದೆ. ಕೆಲವು ಕಾಯಿಲೆಗಿಗೆ ಚಿಕಿತ್ಸೆ ನೀಡಲು ಔಷಧೀಯ ಪದಾರ್ಥವಾಗಿ ಬೆಳಕಿಗೆ ಬಂದ ತಂಬಾಕು, ವರ್ಷಗಳು ಕಳೆದಂತೆ ಹೃದಯ, ಯಕೃತ್ತು ಮತ್ತು ಶ್ವಾಸಕೋಶಕ್ಕೆ ಸಂಬಂಧಿಸಿದ ಅನೇಕ ಕಾಯಿಲೆಗಳಿಗೆ ಒಂದು ಪ್ರಮುಖ ಕಾರಣ

ಅಥವಾ ಅಪಾಯಕಾರಿ ಅಂಶವಾಗಿಬಿಟ್ಟಿದೆ. ಇದು ಮಾನವ ಜೀವಗಳನ್ನು ಉಳಿಸಲು ಬಳಕೆಗೆ ಬಂದಿತ್ತು. ಆದರೆ ದುರದೃಷ್ಟವಶಾತ್ ಮಾನವ ಜೀವಗಳಿಗೆ ಹಾನಿ ಮಾಡಲು ಒಂದು ಕಾರಣವಾಗಿ ಪರಿವರ್ತನೆಯಾಗಿ ಬಿಟ್ಟಿದೆ. ಹಾಗಿದ್ದರೂ ಅನೇಕ ಅಭಿವೃದ್ಧಿ ಹೊಂದುತ್ತಿರುವ ಮತ್ತು ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳ ಹಾಗೆ ಇದನ್ನು ಭಾರತದಲ್ಲಿಯೂ ವ್ಯಾಪಕವಾಗಿ ಧೂಮಪಾನ ಮತ್ತು ಜಗಿಯುವ ಉತ್ಪನ್ನವಾಗಿ ಬಳಸಲಾಗುತ್ತದೆ.

ದೇಶದಲ್ಲಿ ತಂಬಾಕು ನಿಯಂತ್ರಣಕ್ಕೆ ಸಂಬಂಧಿಸಿದ ಭಾರತ ಸರ್ಕಾರದ ನಿರಂತರ ಪ್ರಯತ್ನಗಳೊಂದಿಗೆ ಕೈಜೋಡಿಸಿ, ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಜನರನ್ನು ಅದರಲ್ಲೂ ವಿಶೇಷವಾಗಿ ಯುವಕರನ್ನು ತಂಬಾಕು ಬಳಕೆಯಿಂದ ದೂರವಿಡುವ ಸಲುವಾಗಿ ರಾಜ್ಯದ ಸ್ಥಿತಿಗತಿಗಳನ್ನಾಧರಿಸಿ ಕಾಲಕಾಲಕ್ಕೆ ಸಂಬಂಧಿಸಿದ ಕಾಯ್ದೆ ಮತ್ತು ಶಾಸನಗಳನ್ನು ತಿದ್ದುಪಡಿ ಮಾಡುವ ಮೂಲಕ ತಂಬಾಕು ನಿಯಂತ್ರಣ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಾ ಬರುತ್ತಿದೆ.

ಯುವಕರು ಯಾವುದೇ ರಾಷ್ಟ್ರದ ಶ್ರೇಷ್ಠ ಸಂಪತ್ತು ಮತ್ತು ಶಕ್ತಿಯಾಗಿರುವುದರಿಂದ, ಅವರ ಗುಣಮಟ್ಟವು ರಾಷ್ಟ್ರದ ಭವಿಷ್ಯವನ್ನು ನಿರ್ಧರಿಸುತ್ತದೆ. ಅಂತೆಯೇ, ಗಂಭೀರ ಮತ್ತು ಸಮಗ್ರವಾದ ಯೋಜನೆಯನ್ನು ರೂಪಿಸಿ ರಾಜ್ಯದಾದ್ಯಂತ ಜಾರಿಗೆ ತರಬೇಕಾದ ಸೂಕ್ತ ಸಮಯ ಇದು. ಇದರಿಂದಾಗಿ ಕಿರಿಯ ವಯಸ್ಸಿನಲ್ಲಿ ಯುವಕರು ಹಾನಿಕಾರಕ ತಂಬಾಕು ಉತ್ಪನ್ನಗಳನ್ನು ಬಳಸುವತ್ತ ತಮ್ಮ ಗಮನವನ್ನು ಹರಿಸದೆ ಅವರ ಅಮೂಲ್ಯ ಸಮಯ, ಶಕ್ತಿ ಮತ್ತು ವಯಸ್ಸನ್ನು ಆರೋಗ್ಯಕರ ದೈಹಿಕ ಮತ್ತು ಮಾನಸಿಕ ಆರೋಗ್ಯ ಬೆಳವಣಿಗೆಗೆ ಬಳಸಬೇಕಾಗಿದೆ. ಇದು ಅವರನ್ನು ಯಾವುದೇ ತಂಬಾಕು ಬಳಕೆಯ ಸಂಬಂಧಿದ ಕಾಯಿಲೆಗಳಲ್ಲಿದೆ ದೀರ್ಘಾಯುಷ್ಯವನ್ನು ಹೊಂದುವಂತೆ ಮಾಡುತ್ತದೆ.

ಈ ಮೇಲಿನ ಸನ್ನಿವೇಶವನ್ನು ಪರಿಗಣಿಸಿ, ಮತ್ತು 2007 ಜನಿಸಿದ ಮಗುವಿಗೆ 2025 ರ ವೇಳೆಗೆ ರಾಜ್ಯದಲ್ಲಿ ತಂಬಾಕು ಉತ್ಪನ್ನಗಳು ದೊರೆಯಬಾರದು ಎಂಬ ಪ್ರಸ್ತಾವನೆಯನ್ನಿರಿಸಿಕೊಂಡು 23 ನೇ ಡಿಸೆಂಬರ್ 2020 ರಂದು "ತಂಬಾಕು ಮುಕ್ತ ಕರ್ನಾಟಕ –2025 ಎಂಬ ಒಂದು ರಾಜ್ಯಮಟ್ಟದ ಸಮಾಲೋಚನಾ ಕಾರ್ಯಾಗಾರವನ್ನು ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆಸಲು ಆಯೋಜಿಸಲಾಗಿದ್ದು, ಪ್ರಮುಖ ಪಾಲುದಾರ ಸರ್ಕಾರಿ ಇಲಾಖೆಗಳಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪದವಿ–ಪೂರ್ವ ಶಿಕ್ಷಣ, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ನಗರಾಭಿವೃದ್ಧಿ, ಗೃಹ/ಪೊಲೀಸ್, ಮಕ್ಕಳ ಹಕ್ಕುಗಳ ರಕ್ಷಣೆ, ಕಾರ್ಮಿಕ ಮತ್ತು ಸರ್ಕಾರೇತರ ಸಂಸ್ಥೆಗಳಾದ ದಿ ಯೂನಿಯನ್ ಮತ್ತು ಮಕ್ಕಳ

ಹಕ್ಕುಗಳಿಗೋಸ್ಕರ ಹೋರಾಡುತ್ತಿರುವ ರಾಜ್ಯದ ಇತರೆ ಅಭಿವೃದ್ಧಿ ಸಂಸ್ಥೆಗಳ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ ರಾಜ್ಯದ ಪ್ರಸ್ತುತ ವಾಸ್ತವತೆ ಮತ್ತು ಸನ್ನದ್ಧತೆಯ ಬಗ್ಗೆ ಚರ್ಚಿಸಿ ಒಂದು ಸಮಗ್ರ ಬಹು–ಪಾಲುದಾರರ ಕಾರ್ಯತಂತ್ರನ್ನು ಯುವಜನತೆಯ ಆರೋಗ್ಯದ ದೃಷ್ಟಿಯಿಂದ ಹೊರತರಲು ಯೋಜಿಸಲಾಗಿದೆ.

ಕಾರ್ಯಾಗಾರದಲ್ಲಿ ರಾಜ್ಯ ಸರ್ಕಾರದ ಅನೇಕ ಇಲಾಖೆಗಳು, ಖಾಸಗಿ ಸಂಘ ಸಂಸ್ಥೆಗಳು ಮತ್ತು ತಂಬಾಕು ಬೆಳೆಯುವ ರೈತರು ಸಹ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ತಂಬಾಕು ಬಳಕೆಯ ಜಾಗೃತಿ ಭಿತ್ತಿಪತ್ರಗಳನ್ನು ಬಿಡುಗಡೆ ಮಾಡಲಾಯಿತು.